***ದಿನಾಂಕ 19.09.2020 ರಂದು ವಿಜಯಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.***

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222 ಫೋ: 08182 246165 www.shimul.coop**

## ಅಲ್ಪಾವಧಿ ಟೆಂಡರ್ ಪ್ರಕಟಣೆ

**ಸಂಖ್ಯೆ/ಶಿದಾಚಿಸಹಾಒ/ಶೇಮತಾಂ/ಲಸಿಕಾ. ಕಾ/130/4060/2020-21 ದಿನಾಂಕ: 18.09.2020**

ಕರ್ನಾಟಕ ಸರ್ಕಾರದ ಪಶುಸಂಗೋಪನಾ ಇಲಾಖಾವತಿಯಿಂದ ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ರೈತರ ಜಾನುವಾರುಗಳಿಗೆ ಕಾಲು ಬಾಯಿ ರೋಗ ನಿಯಂತ್ರಣಾ ಲಸಿಕೆ ಕಾರ್ಯಕ್ರಮವು **ದಿನಾಂಕ : 02.10.2020 ರಿಂದ 21.10.2020 ರವರೆಗೆ ಅಂದಾಜು 20 ದಿನಗಳ ಕಾಲ** ನಡೆಯಲಿದ್ದು, ಈ ಅವಧಿಗೆ ಶಿವಮೊಗ್ಗ ಹಾಲು ಒಕ್ಕೂಟವತಿಯಿಂದ ವಾಹನಗಳನ್ನು ಪಡೆದು ಪಶುಸಂಗೋಪನಾ ಇಲಾಖೆಗೆ ಒದಗಿಸಲು ಕರ್ನಾಟಕ ಸರ್ಕಾರದ ಪಾರದರ್ಶಕ ನಿಯಮದಡಿ ವಾಹನಗಳ ಟೆಂಡರ್ ಕರೆದಿದ್ದು, ಹಳದಿ ಬೋರ್ಡ್ ಹೊಂದಿರುವ 6 ರಿಂದ 8 ಜನ ಪ್ರಯಾಣಿಸಲು ಅನುಕೂಲಕರವಾದ **ಟೆಂಪೋಟ್ರಾಕ್ಸ್/ ಕ್ರೂಸರ್/ ಟಾಟಾಸುಮೋ/ಮಾರುತಿವ್ಯಾನ್/ಮಾಕ್ಸಿಮೋ/ಟಾಟಾಏಸ್‌ಗಳನ್ನು** ದಿನ ಬಾಡಿಗೆ ಆಧಾರದಲ್ಲಿ ಒದಗಿಸಬೇಕಾಗಿರುತ್ತದೆ. ಹಳದಿ ಬೋರ್ಡ್ ವಾಹನ ಹೊಂದಿರುವ ಆಸಕ್ತ ವಾಹನ ಮಾಲೀಕರು ಶಿವಮೊಗ್ಗ ಹಾಲು ಒಕ್ಕೂಟದಿಂದ ಟೆಂಡರ್ ಫಾರಂ ಪಡೆದು ಭರ್ತಿ ಮಾಡಿ ಸಲ್ಲಿಸಬಹುದು. ಪ್ರತಿ ಒಂದು ವಾಹನಕ್ಕೆ ಪ್ರತ್ಯೇಕ ಅರ್ಜಿಯನ್ನು ಭರ್ತಿ ಮಾಡಿ ರೂ.2000/- ಇ.ಎಂ.ಡಿ.ಯೊಂದಿಗೆ (ನಗದು/ಡಿ.ಡಿ) ಸಲ್ಲಿಸುವುದು. ಅವಶ್ಯವಿರುವ ವಾಹನಗಳ ವಿವರ ಈ ಕೆಳಕಂಡಂತೆ ಇರುತ್ತದೆ. ವಾಹನ ಮಾಲೀಕರು ಕಡ್ಡಾಯವಾಗಿ ಪಾನ್‌ಕಾರ್ಡ್/ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕಾಗಿರುತ್ತದೆ.

**ಟೆಂಡರ್ ಫಾರಂ ದರ ರೂ. 100/- +18% (ಜಿ.ಎಸ್.ಟಿ. ಪ್ರತ್ಯೇಕ )**

**ಟೆಂಡರ್ ಫಾರಂ ಮಾರಾಟ ದಿನಾಂಕ : 19.09.2020 ರಿಂದ 30.09.2020 ಬೆಳಿಗ್ಗೆ 10.00 ರವರೆಗೆ**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30.09.2020 ಬೆಳಿಗ್ಗೆ 10.55 ಗಂಟೆಯವರೆಗೆ.**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ತೆರೆಯುವ/ದರ ಸಂಧಾನ ಮಾಡುವ ದಿನಾಂಕ:30.09.2020 ಬೆಳಗ್ಗೆ- 11.00 ಗಂಟೆಗೆ**

**ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಚಲಿಸಬೇಕಾಗಿರುವ ಮತ್ತು ಅವಶ್ಯವಿರುವ ವಾಹನಗಳ ವಿವರ ಈ ಕೆಳಕಂಡಂತಿದೆ.**

| ಕ್ರ. ಸಂ | ಶಿವಮೊಗ್ಗ ಜಿಲ್ಲೆ | ಟಾಟಾ ಸುಮೋ/ಕ್ರೂಷರ್ | ದಾವಣಗೆರೆ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ | ಚಿತ್ರದುರ್ಗ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ |
|---|---|---|---|---|---|---|
| 1 | ಶಿವಮೊಗ್ಗ ತಾ|| | 6 | ದಾವಣಗೆರೆ ತಾ|| | 7 | ಚಿತ್ರದುರ್ಗ ತಾ|| | 5 |
| 2 | ಭದ್ರಾವತಿ ತಾ|| | 5 | ಹರಿಹರ ತಾ|| | 4 | ಹೊಸದುರ್ಗ ತಾ|| | 4 |
| 3 | ಸೊರಬ ತಾ|| | 6 | ಚನ್ನಗಿರಿ ತಾ|| | 7 | ಹೊಳಲ್ಕೆರೆ ತಾ|| | 4 |
| 4 | ಶಿಕಾರಿಪುರ ತಾ|| | 6 | ಹೊನ್ನಾಳಿ ತಾ|| | 7 | ಮೊಳಕಾಲ್ಮೂರು ತಾ|| | 3 |
| | | | ಜಗಳೂರು ತಾ|| | 2 | ಹಿರಿಯೂರು ತಾ|| | 5 |
| | | | | | ಚಳ್ಳಕೆರೆ ತಾ|| | 4 |
| ಒಟ್ಟು | | **23** | ಒಟ್ಟು | **27** | ಒಟ್ಟು | **25** |

**ಟೆಂಡರ್ ಫಾರಂಗಳು ಶಿವಮೊಗ್ಗ ಹಾಲು ಒಕ್ಕೂಟ, ಮಾಚೇನಹಳ್ಳಿ ಶಿವಮೊಗ್ಗ, ಇಲ್ಲಿ ದಿನಾಂಕ : 19.09.2020 ರಿಂದ 30.09.2020 ರ ಬೆಳಿಗ್ಗೆ 10.00ರ ವರೆಗೆ ಮತ್ತು ದಾವಣಗೆರೆ ಡೇರಿ ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿ 19.09.2020 ರಿಂದ 29.09.2020 ರ ಸಂಜೆ 5.00 ಗಂಟೆಯವರೆಗೆ ದೊರೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಹಾಲು ಒಕ್ಕೂಟದ(ಶೇಮತಾಂ) ವಿಭಾಗವನ್ನು ಸಂಪರ್ಕಿಸಬಹುದಾಗಿದೆ.**

ಸಹಿ/-

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**